
# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE **Vol. VIII No. 9** **ಸೆಪ್ಟೆಂಬರ 1990**



GANAPATI FROM CHAUN, CHINA – PAINTING BY N. C. DESAI

**The Mysore Association, Bombay**

393, Bhaudaji Road, Matunga, Bombay 400 019.
Tel. : 4374647 / 4379574 Grams : "KARUNADU"

# ಶ್ರೀ ಸ್ವರ್ಣಗೌರಿ ಹಾಗೂ ಶ್ರೀ ಮಹಾಗಣಪತಿ ಉತ್ಸವ

ಪ್ರತಿ ವರ್ಷದಂತೆ ಈ ವರ್ಷವೂ ಸ್ವರ್ಣಗೌರಿ ಹಾಗೂ ಶ್ರೀ ಮಹಾಗಣಪತಿಉತ್ಸವವನ್ನು ಮೈಸೂರು ಅಸೋಸಿಯೇಷನ್ ಬಹಳ ವಿಜೃಂಭಣೆಯಿಂದ ಆಚರಿಸಿತು. ಈ ಉತ್ಸವದ ಅಂಗವಾಗಿ ಅನೇಕ ಸಂಗೀತ ಕಾರ್ಯಕ್ರಮಗಳನ್ನು ಈ ವರ್ಷವೂ ಹಮ್ಮಿಕೊಳ್ಳಲಾಗಿತ್ತು. ಸಂಗೀತ ಕಾರ್ಯಕ್ರಮಗಳು ಗಣಪತಿ ಹಬ್ಬದ ಮೂರನೆಯ ದಿನದಿಂದ ಪ್ರಾರಂಭವಾದವು.

ಮೊದಲನೆಯ ದಿನ ಅಂದರೆ 25-8-90ರಂದು ಕಾರ್ಯಕ್ರಮವು ಪ್ರಸಿದ್ಧ ಸಂಗೀತಗಾರರಾದ ಪಂಡಿತ ಡಿ. ಕೆ. ದಾತಾರ್‌ರವರ ವಯೊಲಿನ್ ವಾದನದಿಂದ ಮೊದಲುಗೊಂಡಿತು. ಇವರು ಪಂಡಿತ ಡಿ.ವಿ. ಪಲುಸ್ಕರ್ ಅವರಿಂದ ಕಲಿತವರು. ಇವರ ಇವತ್ತಿನ ಕಾರ್ಯಕ್ರಮವು ಯಮನ್ ರಾಗದಿಂದ ಪ್ರಾರಂಭವಾಗಿ ಜೋಗ್ ರಾಗವನ್ನುಅನುಸರಿಸಿ ಮಿಶ್ರ ಖಮಾಜ್‌ನಲ್ಲಿ ಮುಕ್ತಾಯವಾಯಿತು. ಇವರಿಗೆ ತಬುಲಾ ಮೇಲೆ ಪಂಡಿತ ತಾರಾನಾಥ್‌ಜಿಯವರ ಶಿಷ್ಯರಾದ ಶ್ರೀ ಸದಾನಂದ ನಾಯಂಪಲ್ಲಿಯವರು ಜೊತೆಕೊಟ್ಟರು.

ಎರಡನೆಯ ದಿನದ ಕಾರ್ಯಕ್ರಮವನ್ನು ಶ್ರೀಮತಿ ಮಧು ನಂದ ಮತ್ತು ಕುಮಾರಿ ನಂದಿನಿ ವಿಶ್ವನಾಥ್ ಇವರಿಬ್ಬರೂ ಸೇರಿ ನಡೆಸಿಕೊಟ್ಟರು. ಇವರೊಂದಿಗೆ ಶ್ರೀಪಟ್ಟಾಭಿರಾಮ್‌ರವರು ಹಾರ್ಮೋನಿಯಂ ಅನ್ನೂ ಮತ್ತು ಶ್ರೀ ಕೃಷ್ಣಕುಮಾರ್‌ರವರು ಮೃದಂಗವನ್ನೂ ನುಡಿಸಿದರು. ಈ ದಿನದ ಕಾರ್ಯಕ್ರಮದ ವೀಶೇಷತೆ ಎಂದರೆ ಇದು ಹಿಂದೂಸ್ತಾನಿ ಹಾಗೂ ಕರ್ನಾಟಕ ಎರಡೂ ಶೈಲಿಗಳನ್ನು ಹೊಂದಿದ್ದು ಲಘುಶಾಸ್ತ್ರಿಯ ಗಾಯನವಾಗಿತ್ತು. ಇವರಿಬ್ಬರೂ ಇನ್ನೂ ಕಲಿಯುತ್ತಿರುವ ವಿದ್ಯಾರ್ಥಿನಿಯರಾದರೂ ಸುಶ್ರಾವ್ಯವಾಗಿ ಹಾಡಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

27-8-90 ಅಂದರೆ ಮೂರನೇದಿನದ ಕಾರ್ಯಕ್ರಮವು ಶೀಮತಿ .ನೀಲಾ ಘಾಣೇಕರ್ ಮತ್ತುತಂಡದವರಿಂದ ನಡೆಯಿತು. ಇವರು ಕಾಂದಿವಿಲಿಯಿಂದ ಇಲ್ಲಿಯವರೆಗೆ ಬಂದು ತಮ್ಮ ಕಾರ್ಯಕ್ರಮವನ್ನುಯಶಸ್ವಿಯಾಗಿ ನಡೆಸಿಕೊಟ್ಟರು. ಕನ್ನಡಿಗರೂ ಮತ್ತುಮರಾಠಿಗರೂ ಒಟ್ಟಾಗಿ ಕೂಡಿದ್ದ ಈ ತಂಡವು ಹಿಂದಿ, ಮರಾಠಿ ಹಾಗೂ ಕನ್ನಡ ಭಾಷೆಗಳಲ್ಲಿ ಭಕ್ತಿ ಗೀತೆಗಳನ್ನು ಹಾಡಿ ಎಲ್ಲರ ಮನ ರಂಜಿಸಿತು. ಇವರ ಹಾಡಿಕೆಯು ತುಕಾರಾಮ, ನಾಮದೇವ, ಪುರಂದರದಾಸ, ಸೂರದಾಸ ಮುಂತಾದ ಭಕ್ತ ಶ್ರೇಷ್ಠರ ಕೃತಿಗಳಿಂದ ಕೂಡಿತ್ತು.



ಶ್ರೀ ಡಿ. ಕೆ. ದಾತಾರ್ ಮತ್ತು ಸಂಗಡಿಗರು

ನಾಲ್ಕನೆಯ ದಿನದ (28-8-90) ಅಂಗವಾಗಿ ಕರ್ನಾಟಕ ಶೈಲಿಯಲ್ಲಿ ಸಂಗೀತವನ್ನು ಏರ್ಪಡಿಸಲಾಗಿತ್ತು. ಇದನ್ನು ನಡೆಸಿಕೊಟ್ಟವರು ಶ್ರೀಮತಿ ಸರಸ್ವತಿ ಮುರಳೀಧರ್ ಅವರು. ಈಕೆ ಚಿಕ್ಕಂದಿನಲ್ಲಿ ತಮ್ಮ ತಂದೆಯವರಿಂದ ಸಂಗೀತವನ್ನು ಕಲಿಯಲು ಪ್ರಾರಂಭಿಸಿ ಕಾಲೇಜಿನಲ್ಲೂ ಇದನ್ನೇ ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದರಲ್ಲದೆ ಜೊತೆಯಲ್ಲೇ ಶ್ರೀ M. A. ನರಸಿಂಹಾಚಾರ್ಯರಿಂದಲೂ ಕಲಿತರು. ಇವರ ಕಾರ್ಯಕ್ರಮವು ಚಕ್ರವಾಕ ರಾಗದ ದೀಕ್ಷಿತರ ಕೃತಿಯಾದ ಗಜಾನನ ಯುತಂ ಕೀರ್ತನೆಯಿಂದ ಪ್ರಾರಂಭವಾಗಿ ವಿಸ್ತಾರ ವಾದ ತೋಡಿ ಮತ್ತು ಖರಹರಪ್ರಿಯ ರಾಗವನ್ನೊಳಗೊಂಡು ಅನೇಕ ದೇವರನಾಮಗಳಿಂದ ಮುಕ್ತಾಯ ವಾಯಿತು.

29-8-1990ರಂದು ಐದನೆಯ ದಿನದ ಕಾರ್ಯಕ್ರಮ. ಈ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರು ಶ್ರೀಮತಿ ವಸುಮತಿ ಬದರೀನಾಥ್. ಇವರ ಜೊತೆಗೆ ವಯೊಲಿನ್ ನುಡಿಸಿದವರು ಕು. ಸೌಮ್ಯ ಮತ್ತು ಮೃದಂಗನುಡಿಸಿದವರು ಶ್ರೀ ಶ್ರೀರಾಂ. ಇವರು ಚಿಕ್ಕಂದಿನಲ್ಲಿ ತಮ್ಮ ತಾಯಿಯವರಿಂದಲೂ ಮುಂದೆ ಶ್ರೀಮತಿ ಬಾಲಮಣಿಯವರಿಂದಲೂ ಸಂಗೀತ ಕಲಿತರು. ಇವರ ಹಾಡುಗಾರಿಕೆಯಲ್ಲಿ ತ್ಯಾಗರಾಜರು, ಪುರಂದರದಾಸರು, ದೀಕ್ಷಿತರು ಮುಂತಾದವರ ಕೃತಿಗಳಿದ್ದವು. ಇವರು ಆಂದೋಲಿಕಾ, ಕಾಮವರ್ಧಿನಿ ಮತ್ತು ಶುದ್ಧಸಾವೇರಿರಾಗಗಳನ್ನು ವಿಸ್ತಾರವಾಗಿ ಹಾಡಿ ಸ್ವರ, ನೆರವಲ್ ಮುಂತಾದ ವಿಶೇಷತೆಗಳಿಂದ ಜನರನ್ನು ರಂಜಿಸಿದರು.

ಆರನೆಯ ದಿನವಾದ ತಾ. 30-8-90ನೇ ಸಂಜೆಯ ಕಾರ್ಯಕ್ರಮದ ವಿಶೇಷತೆಯಂದರೆ ನಮ್ಮ ಅಸೋಸಿಯೇಷನ್‌ನ ಹಿರಿಯ ಸದಸ್ಯೆಯಾದ ಶ್ರೀಮತಿ ಸೀತಮ್ಮ ರಾವ್ ಹಾಗೂ ತಂಡದವರ ಕಾರ್ಯಕ್ರಮ. ಅವರ ಈ ಇಳಿ ವಯಸ್ಸಿನ ಉತ್ಸಾಹ ಯುವಪೀಳಿಗೆಯನ್ನು ನಾಚಿಸುವಂತಿತ್ತು. ಕಾರ್ಯಕ್ರಮದ ವಿಶೇಷತೆಯೆಂದರೆ ಶ್ರೀ ಗಣನಾಥ ಮತ್ತು ಪಾರ್ವತಿ ದೇವಿಯನ್ನು ಕುರಿತಂತಹ ಭಕ್ತಿ ಗೀತೆಗಳು. ಇದರಲ್ಲಿ ಕೆಲವೊಂದು ಹಾಡುಗಳು ಸ್ವಂತರಚನೆಯೂ ಆಗಿದ್ದವು. "ಗಣಪತಿ ಬಾರೋ" ಎಂಬ ಹಾಡು ಜಾನಪದ ಶೈಲಿಯಲ್ಲೂ, "ಮುದಾಕರಾತ್ತ ಮೋದಕಂ" ಎಂಬ ಶ್ಲೋಕವನ್ನು ರಾಗಮಾಲಿಕೆಯಲ್ಲೂ ಹಾಡಿದರು.

ಏಳನೆಯ ದಿನ ತಾ. 31-8-90ರಂದು ಕರ್ನಾಟಕ ಶೈಲಿಯಲ್ಲಿ ಹಾಡಿದವರು ಶ್ರೀಮತಿ ವಿಜಯಲಕ್ಷ್ಮೀನಾಥನ್. ಇವರು ಕಳೆದ ಮೂವತ್ತೆಂಟು ವರ್ಷಗಳಿಂದ ನಮ್ಮ ಅಸೋಸಿಯೇಷನ್‌ನಲ್ಲಿ ಕಾರ್ಯಕ್ರಮವನ್ನು ನಡೆಸಿಕೊಡುತ್ತಾ ಬಂದಿದ್ದಾರೆ. ಅವರ ಪರಿಚಯ ಎಲ್ಲರಿಗೂ ಇರುವುದರಿಂದ ಇಲ್ಲಿ ಅನಾವಶ್ಯಕ. ಇವರ ಕಾರ್ಯಕ್ರಮದ ಹೆಚ್ಚಿನಂಶವೆಲ್ಲಾ ದೇವರ ನಾಮಗಳೇ ಆಗಿದ್ದವು. ಬಾರಯ್ಯ ವೆಂಕಟರಮಣ ಎಂಬ ಕೃತಿಯನ್ನು ವಿಸ್ತಾರವಾದ ಭೈರವಿ ರಾಗ, ನೆರವಲ್, ಸ್ವರ ಪ್ರಸ್ತಾರದೊಂದಿಗೆ ಹಾಡಿದರು. ಹಾಗೂ ಕೊನೆಯಲ್ಲಿ "ಶಿವರಾಮಕೃಷ್ಣ ಗೋವಿಂದ ನರಹರಿ ನಾರಾಯಣ ಕಾಶಿ ವಿಶ್ವನಾಥ" ಎಂಬ ದೇವರನಾಮವನ್ನು ರಾಗಮಾಲಿಕೆಯೊಂದಿಗೆ ಹಾಡಿ ಮಂಗಳ ಹಾಡಿದರು.

ಎಂಟನೆಯ ದಿನ 1-9-90ರ ಕಾರ್ಯಕ್ರಮವನ್ನು ಶ್ರೀಮತಿ ಸುಶೀಲಾ ಆಚಾರ್ಯ ಮತ್ತು ತಂಡದವರು ನಡೆಸಿಕೊಟ್ಟರು. ಶ್ರೀಮತಿ ಸುಶೀಲಾ ಆಚಾರ್ಯರವರು ಕೂಡಾ ನಮ್ಮ ಅಸೋಸಿಯೇಶನ್‌ನ ಹಿರಿಯ ಸದಸ್ಯೆ ಹಾಗೂ ಮಕ್ಕಳಾದಿಯಾಗಿ ಅವರನ್ನು ಎಲ್ಲರೂ ಚೆನ್ನಾಗಿ ಬಲ್ಲರು. ಭಕ್ತಿ ಸಂಗೀತದಿಂದ ಕೂಡಿದ್ದ ಈ ಕಾರ್ಯಕ್ರಮದಲ್ಲಿ ಇವರದ್ದೇ ಆದ ಕೆಲವು ಕೃತಿಗಳೂ ಇದ್ದವು. ಇದರಲ್ಲಿ ಗಣಪತಿಯನ್ನು ಕುರಿತಂತಹ "ಹೊರಟಳು ಪಾರ್ವತಿ ಸ್ನಾನಕ್ಕೆ . . ."ಎಂಬ ಕೃತಿಯು ಬಹಳ ಚೆನ್ನಾಗಿ ಮೂಡಿ ಬಂತು. ಗಣಪತಿಯ ಜನನ ಹೇಗಾಯ್ತೆಂದು ಪ್ರಾರಂಭವಾದ ಈ ಕೃತಿಯಲ್ಲಿ ಗಣಪತಿಯು ಗಜಾನನ ಹೇಗಾದ ಮತ್ತು ಸ್ಯಮಂತಕೋಪಾಖ್ಯಾನವೂ ಕೂಡಾ ಮೂಡಿ ಬಂತು.

ಕೊನೆಯದಾಗಿ ಅಂದರೆ ತಾ. 2-9-90ರಂದು ಭಾನುವಾರ ಮಹಾಗಣಪತಿಯ ವಿಸರ್ಜನೆ ದಿನ ಪೂಜೆ, ವೇದಪಠಣದಿಂದ ಪ್ರಾರಂಭವಾದ ಕಾರ್ಯಕ್ರಮ ಶ್ರೀಮತಿ ಪ್ರಮೋದಿನಿಯವ ಕೆಲವಾರು ಭಕ್ತಿಗೀತೆಗಳು, ಗಣಪತಿಯ ವಿಸರ್ಜನೆ, ಮೆರವಣಿಗೆ ದಾದರ್ ಸಮುದ್ರದಲ್ಲಿ ಮೂರ್ತಿಯ ಬಿಳ್ಕೋಡುಗೆ, ಪ್ರಸಾದ ವಿನಿಯೋಗ ಈ ಎಲ್ಲ ಕಾರ್ಯಕ್ರಮಗಳಿಂದ ಯಶಸ್ವಿಗೊಂಡಿತು. ಅಷ್ಟೂ ದಿನದ ಕಾರ್ಯಕ್ರಮಗಳಲ್ಲಿ ಭಕ್ತಾದಿಗಳೆಲ್ಲಾ ಬಂದು ದೇವರ ದರ್ಶನವನ್ನು ಪಡೆದು ಸಂಗೀತ ಕಾರ್ಯಕ್ರಮದ ಸವಿಯನ್ನು ಸವಿದು ಆನಂದಿಸಿದರು.

*ಶ್ರೀಮತಿ ಲಲಿತಾ ಬಾಲು & ಶ್ರೀ S. ನಂದಾ*




ಶ್ರೀಮತಿ ಸೀತಮ್ಮ ರಾವ್ ಮತ್ತು ಸಂಗಡಿಗರು

# ಸ್ನೇಹ ಕೂಟ

ತಾ. 2-9-90 ಭಾನುವಾರದಂದು ಸಂಜೆ 7-30ಕ್ಕೆ ಅಸೋಸಿಯೇಶನ್ನಿನ ಸಭಾಂಗಣದಲ್ಲಿ ಕರ್ನಾಟಕ ಸರಕಾರದ, ಕನ್ನಡ ಮತ್ತು ಸಂಸ್ಕೃತ ಇಲಾಖೆಯ ನಿರ್ದೇಶಕರಾದ ಶ್ರೀ ಪಾರ್ಥಸಾರಥಿಯವರ ಗೌರವಾರ್ಥವಾಗಿ ಒಂದು ಸ್ನೇಹಕೂಟವನ್ನು ಕರೆಯಲಾಗಿತ್ತು. ಮುಂಬಯಿನ ನಾನಾ ವಿಭಾಗದಲ್ಲಿರುವ ಸುಮಾರು 40ಕ್ಕೂ ಹೆಚ್ಚಿನ ಕನ್ನಡ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಪ್ರತಿಯೊಬ್ಬರೂ ತಮ್ಮ ತಮ್ಮ ಪರಿಚಯ ಮಾಡಿಕೊಟ್ಟ ಮೇಲೆ ಶ್ರೀ ಪಾರ್ಥಸಾರಥಿಯವರು ಮಾತನಾಡುತ್ತ ತಮ್ಮ ಮೊದಲ ಭೇಟಿಯಲ್ಲೇ ಮುಂಬಯಿಯಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಕನ್ನಡ ಸಂಘ ಸಂಸ್ಥೆಗಳ ಪರಿಚಯವಾಗಿದ್ದು ಅವರೆಲ್ಲ ಅನೇಕ ದಶಕಗಳಿಂದ ಕನ್ನಡವನ್ನು ಮತ್ತು ಕನ್ನಡ ಸಂಸ್ಕೃತಿಯನ್ನು ಈ ಪ್ರದೇಶದಲ್ಲಿ ಉಳಿಸಿ ಬೆಳೆಸಿಕೊಂಡು ಬರುತ್ತಿರುವುದು ತುಂಬಾ ಸಂತೋಷದ ವಿಷಯವೆಂದರು. ಮುಂಬಯಿನ ಕನ್ನಡ ಸಂಸ್ಥೆಗಳು ಕನ್ನಡ ಸಂಸ್ಕೃತಿಯ ಪ್ರತಿನಿದಿಗಳಾಗಿರುತ್ತವೆಂದೂ, ಅದಕ್ಕಾಗಿ ಈ ಎಲ್ಲಾ ಸಂಸ್ಥೆಗಳ ಯೋಜನೆಗಳನ್ನು ತಮ್ಮ ಧ್ಯೇಯ ಸಾಧನೆಗಾಗಿ ಅಳವಡಿಸಿಕೊಂಡು ಯಶಸ್ವಿಗೊಳಿಸುವುದು ಕರ್ನಾಟಕ ಸರಕಾರದ ಬಾಧ್ಯತೆಯಾಗಿರುತ್ತದೆಂದರು. ಅದಕ್ಕಾಗಿ ಇಲ್ಲಿನ ಕನ್ನಡ ಸಂಘ ಸಂಸ್ಥೆಗಳು ತಮ್ಮ ಯೋಜನೆಯ ಪೂರ್ಣಮಾಹಿತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒಪ್ಪಿಸಬೇಕೆಂದೂ ಹಾಗೂ ಯಾವ ರೀತಿಯಿಂದ ಸಹಾಯಬೇಕೆಂದು ಇಲಾಖೆಗೆ ತಿಳಿಸಬೇಕೆಂದೂ ಕೇಳಿಕೊಂಡರು. ಹಾಗೆಯೇ ಕನ್ನಡ ಸಂಸ್ಕೃತಿಯ ಪ್ರಚಾರಮಾಧ್ಯಮವಾಗಿ ಕಲಾವಿದರ ಮೇಳಗಳನ್ನು ಬೇರೆ ಬೇರೆ ಭಾಗಕ್ಕೆ ಕಳುಹಿಸಿ ಕಾರ್ಯಕ್ರಮಗಳನ್ನು ಕೊಡುವ ಯೋಜನೆ ಇರುವುದರಿಂದ ಎಲ್ಲಾ ಕನ್ನಡ ಕಲಾವಿದರ ಪಟ್ಟಿಯನ್ನೂ ಸಹ ತಮ್ಮ ಇಲಾಖೆಗೆ ಕಳುಹಿಸಬೇಕೆಂದು ಕೇಳಿಕೊಂಡರು. ಈ ಭಾಗದ ಕಲಾವಿದರನ್ನೂ ಕರ್ನಾಟಕದ ಕಲಾವಿದರೆಂದೇ ಪರಿಗಣಿಸಲಾಗುತ್ತದೆಂದೂ ತಿಳಿಸಿದರು. ಮುಂಬಯಿನ ಎಲ್ಲಾ ಕನ್ನಡ ಸಂಘಗಳೂ ಒಂದೊಂದು ವಾಚನಾಲಯವನ್ನು ನಡೆಸುತ್ತಿರುವುದು ತುಂಬಾ ಸಂತೋಷಕರವಾದ ವಿಷಯವೆಂದು ತಿಳಿಸುತ್ತ ತಮ್ಮ ಇಲಾಖೆಯಿಂದ ಬೇಕಾದ ಸಹಕಾರವನ್ನು ಕೊಡಿಸುವುದಾಗಿಯೂ ತಿಳಿಸಿದರು.

ಶ್ರೀ ಪಾರ್ಥಸಾರಥಿಯವರು ಮಾತನಾಡಿದ



*ಶ್ರೀ ಬಿ. ಪಾರ್ಥಸಾರಥಿಯವರು ಮಾತನಾಡುತ್ತಿರುವುದು.*

ನಂತರ ಬಂದಿದ್ದ ಎಲ್ಲಾ ಕನ್ನಡ ಸಂಸ್ಥೆಗಳ ಪ್ರತಿನಿಧಿಗಳೂ ತಮ್ಮ ತಮ್ಮ ಸಂಸ್ಥೆಯ ಯೋಜನೆಗಳ ಕುರಿತು ಬರೆದು ತಂದಿದ್ದ ಮಾಹಿತಿಯನ್ನು ಪಾರ್ಥಸಾರಥಿಯವರಿಗೆ ಒಪ್ಪಿಸಿದರು. ಕನ್ನಡ ಕಲಾ ಕೇಂದ್ರದ ಕಾರ್ಯಕರ್ತರಾದ ಶ್ರೀ ಸೋಮೇಶ್ವರರು ಕನ್ನಡ ಕಲಾ ಕೇಂದ್ರವು ಈ ವರ್ಷ ಬೆಳ್ಳಿ ಹಬ್ಬವನ್ನು ಆಚರಿಸಲಿದೆಯೆಂದೂ, ಇಷ್ಟು ವರ್ಷವೂ ಅದು ಸ್ವತಂತ್ರ್ಯವಾಗಿ ತನ್ನ ಕಾರ್ಯಕ್ರಮಗಳನ್ನು ನಡೆಸಿಕೊಂಡುಬಂದಿದೆಯೆಂದೂ ಈ ವರ್ಷ ಮಾತ್ರ ಬೆಳ್ಳಿ ಹಬ್ಬದ ಪ್ರಯುಕ್ತ ಕರ್ನಾಟಕ ಸರಕಾರ ತನ್ನ ಸಹಾಯಹಸ್ತವನ್ನು ನೀಡಬೇಕೆಂದೂ ತಿಳಿಸಿದರು. ನಂತರ ಕನ್ನಡ ವನಿತಾ ಸಮಾಜದ ಕಾರ್ಯಕರ್ತೆ ಶ್ರೀಮತಿ ಉಷಾ ಜೈರಾಂ ಅವರು ಕನ್ನಡ ವನಿತಾ ಸಮಾಜವೂ ಸಹ ಈ ವರ್ಷ ಬೆಳ್ಳಿ ಹಬ್ಬ ಆಚರಿಸುತ್ತಿರುವ ವಿಷಯ ತಿಳಿಸುತ್ತ ನೆರೆದಿದ್ದ ಮುಂಬಯಿನ ಇತರ ಸಂಸ್ಥೆಗಳಿಂದಲೂ ಸಹ ತಮ್ಮ ಕಾರ್ಯಕ್ರಮಗಳಿಗೆ ನೆರವು ಸಿಗಬೇಕೆಂದು ಕೇಳಿಕೊಂಡರು.




*ಶ್ರೀ ಪಾರ್ಥಸಾರಥಿಯವರೊಂದಿಗೆ ಮುಂಬೈ ಕನ್ನಡಿಗರು.*

ಇದೇ ಸಂದರ್ಭದಲ್ಲಿ ಅಸೋಸಿಯೇಶನ್ ಕಾರ್ಯದರ್ಶಿಗಳಾದ ಶ್ರೀ ಪ್ರಸಾದ ಅವರುಎಲ್ಲರಿಗೂ ಅಸೋಸಿಯೇಶನ್ನಿನಲ್ಲಿ ಏರ್ಪಡಿಸಿದ್ದ ಶ್ರೀ N. C. ದೇಸಾಯಿಯವರ ಚಿತ್ರಕಲಾ ಪ್ರದರ್ಶನದ ವಿಷಯ ತಿಳಿಸಿದರು. ಪಾರ್ಥಸಾರಥಿಯವರ ಹಸ್ತದಿಂದ ಶ್ರೀ N. C. ದೆಸಾಯಿಯವರಿಗೆ ಅಸೋಸಿಯೇಶನ್ ನೀಡಿದ ಗೌರವ ಧನದ ಕಾಣಿಕೆಯನ್ನು ಒಪ್ಪಿಸಲಾಯಿತು. ಹಾಗೆಯೇ ಅಸೋಸಿಯೇಶನ್ ಕನ್ನಡ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪ್ರೋತ್ಸಾಹನೆಗಾಗಿ ಏರ್ಪಡಿಸಲಿರುವ ವಿದ್ಯಾರ್ಥಿವೇತನದ ಬಗ್ಗೆ ತಿಳಿಸುತ್ತ ಶ್ರೀ ಪ್ರಸಾದ್ ಅವರು ಈ ವರ್ಷ ಕೆ. ಜೆ. ಸೋಮಯ್ಯ ಕಾಲೇಜಿನ ಬಿ. ಎ. ವಿದ್ಯಾರ್ಥಿನಿ ಕುಮಾರಿ ಸಾವಿತ್ರಿ ಮೆಂಡನ್ ಅವರಿಗೆ ಒಂದು ವಿಶೇಷ ಸಹಾಯ ಧನವನ್ನು ಕೊಡುತ್ತಿರುವ ವಿಷಯ ತಿಳಿಸಿದರು. ಇದನ್ನೂ ಸಹ ಪಾರ್ಥಸಾರಥಿಯವರ ಕೈಯಿಂ ದಲೇ ಕು. ಸಾವಿತ್ರಿಯವರಿಗೆ ನೀಡಲಾಯಿತು. ಕೊನೆಯದಾಗಿ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಅಸೋಸಿಯೇಶನ್ನಿನ ಸ್ವರ್ಣ ಮಹೋತ್ಸವದ ಸ್ಮರಣೆಯಲ್ಲಿ ನೀಡಿದ ದತ್ತಿ ಉಪನ್ಯಾಸದ ಮಾಲೆಯ ಮೂಲ ಧನವನ್ನು 20000ರೂ. ಗಳಿದ 30000ರೂ. ಗಳಿಗೆ ಏರಿಸಲಾಗಿದೆಯೆಂದು ಶ್ರೀ ಪ್ರಸಾದ್ ಘೋಷಿದರು.

ಸ್ನೇಹಕೂಟ ರುಚಿಕರವಾದವು ಭೋಜನದೊಂದಿಗೆ ಮುಕ್ತಾಯವಾಯಿತು.

# ಸ್ವಾತಂತ್ರ್ಯ ದಿನಾಚರಣೆ



*ಶೃತ, ಮಧು, ಮತ್ತು ರವಿಶಂಕರ.*

ಆಗಸ್ಟ್ 15ರಂದು ಪ್ರತಿ ವರ್ಷದಂತೆ ಈ ವರ್ಷವೂ ಅಸೋಸಿಯೇಶನ್ನಿನಲ್ಲಿ ಬೆಳಿಗ್ಗೆ ಧ್ವಜಾರೋಹಣವಾಯಿತು. ಅಂದು ಸಂಜೆ ಒಂದು ಲಘು ಸಂಗೀತದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಅಸೋಸಿಯೇಷನ್ನಿನ ಸದಸ್ಯರು ಮತ್ತು ಅವರ ಮಕ್ಕಳು ಇದರಲ್ಲಿ ಭಾಗವಹಿಸಿದ್ದರು. ರವಿಶಂಕರ್ ಅವರ ನೇತೃತ್ವದಲ್ಲಿ ಮಧುನಂದಾ, ಶೃತಾ ವಿಶ್ವನಾಥ್, ವಿನಾಯಕ ಹೆಗಡೆ, ರವಿಶಂಕರ, ಅರ್ಜುನ ಅವರುಗಳು ಹಳೆಯ ಹಿಂದೀ ಚಿತ್ರಗೀತೆಗಳನ್ನು ಹಾಡಿದರು. ಇವರಿಗೆ ಜೊತೆಯಾಗಿ ರಘುರಾಮ್ Keyboard, ಚೇತನ್ ತಬಲಾ ಹಾಗೂ ರವಿಶಂಕರ್ ಹಾರ್ಮೋನಿಯಂ ನುಡಿಸಿದರು. ನಾಗೇಶ ಬೆಳವಾಡಿಯವರು ಕಾರ್ಯಕ್ರಮವನ್ನು ನಡೆಸಿಕೊಡುತ್ತಾ ಹಾಡುಗಳ ಪರಿಚಯ, ಸೂಕ್ತ ಹಿನ್ನಲೆಯನ್ನು ನೀಡಿದರು. ನೆರೆದಿದ್ದ ಜನರ ಮನರಂಜಿಸಿ ಮೆಚ್ಚುಗೆಯನ್ನು ಪಡೆದ ಈ ಸಂಗೀತ ಕಾರ್ಯಕ್ರಮದ ನಂತರ ಹಬ್ಬದೂಟ ಏರ್ಪಡಿಸಲಾಗಿತ್ತು.

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For

इंडियन एयरलाइन्स
Indian Airlines

वायुदूत
Vayudoot

REGD. OFFICE :
3/15 ASHIANA SECTOR - 17
VASHI - NEW BOMBAY
0215/682558-591
GRAMS : AUGTRASERV

ALSO AT :
2/16 KABBUR HOUSE
SION(E) BOMBAY 400 022.
4077750-2984/4093573

# ಭಾರತದಾಚೆ ಇರುವ ಗಣಪತಿಗಳ ವರ್ಣಚಿತ್ರ ಪ್ರದರ್ಶನ



ಶ್ರೀ ಹರೀಶ್ ರಾವುತ್‌ರವರು ಪ್ರದರ್ಶನವನ್ನು ಉದ್ಘಾಟಿಸುತ್ತಿರುವುದು.

ಮೈಸೂರು ಅಸೋಸಿಯೇಷನ್ನಿನಲ್ಲಿ ಆಗಸ್ಟ್ 27ರಿಂದ ಸೆಪ್ಟಂಬರ್ 2ರ ವರೆಗ ಶ್ರೀ ಎನ್. ಸಿ. ದೇಸಾಯಿಯವರು ರಚಿಸಿದ ವರ್ಣ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಿತ್ತು. ಈ ಪ್ರದರ್ಶನದ ವಿಶೇಷವೇನಂದರೆ, ಇವು ಭಾರತದಾಚೆ ಇರುವ ಗಣಪತಿಗಳನ್ನು ಆಧರಿಸಿ ರಚಿಸಿದವು. ಅನೇಕರಿಗೆ ಭಾರತದ ಆಚೆಗೂ ಕೂಡ ಗಣಪತಿ ಪೂಜೆಯ ಪದ್ಧತಿ ಹರಡಿತ್ತು ಎಂಬುದು ತಿಳಿಯದಿರಬಹುದು. ಹಿಂದಿನ ಕಾಲದಲ್ಲಿ ಭಾರತದ ವರ್ತಕರು ಹೊರದೇಶಗಳಿಗೆ ಹೋದಾಗ, ಅವರು ತಮ್ಮೊಡನೆ ಗಣಪತಿಗಳನ್ನು ಪೂಜೆಗೆ ತೆಗೆದುಕೊಂಡು ಹೋದರೆಂದೂ, ಆದ್ದರಿಂದ ಆ ದೇಶಗಳಲ್ಲಿ ಗಣಪತಿಪೂಜೆಯ ಪದ್ಧತಿ ಹರಡಿತೆಂದೂ ಕೆಲವರ ಅಭಿಪ್ರಾಯ. ಮತ್ತೆ ಕೆಲವರು ಭಾರತೀಯರು ಬೇರೆ ದೇಶಕ್ಕೆ ವಲಸೆ ಹೋಗಿದ್ದರಿಂದ, ಆದೇಶಗಳಲ್ಲಿ ಈ ಪದ್ಧತಿ ಪ್ರಚಲಿತವಾಯಿತೆಂದೂ ನಂಬುತ್ತಾರೆ.

ಅಫಘಾನಿಸ್ಥಾನ್, ಚೀನ, ಜಪಾನ್, ಥಾಯಲಾಂಡ್, ಬೋರ್ನಿಯೋ, ಜಾವಾ, ಟಿಬೇಟ್, ನೇಪಾಲ್ ಮತ್ತು ಶೀಲಂಕಾ ಮುಂತಾದ ದೇಶಗಳಲ್ಲಿ ಗಣಪತಿಯ ಪೂಜೆ ಹಿಂದಿನಿಂದ ನಡೆದು ಬಂದಿದೆ.


ಶ್ರೀ ದೇಸಾಯಿಯವರ ಗಮನವನ್ನು ಈ ಗಣಪತಿಗಳ ಬಗ್ಗೆ ಸೆಳೆದದ್ದು ಶ್ರೀ ಗೋವಾರ್ದನ ಅಂಕೋಲೇಕರ್‌ಅವರ ಹೊರನಾಡಿನ ಗಣಪತಿಗಳ ಪ್ರತಿಗಳ (Replic) ಸಂಗ್ರಹ. ಇವುಗಳಿಂದ ಪ್ರಭಾವಿತರಾದ ಶ್ರೀ ದೇಸಾಯಿಯವರು ಇವನ್ನು ತಮ್ಮ ಕುಂಚದಿಂದ ಪುನರ್ರಚಿಸಿದ್ದಾರೆ. ಕಳೆದ ವರ್ಷ ಶ್ರೀ ದೇಸಾಯಿಯವರು ತಮ್ಮ ಈ ಚಿತ್ರಗಳ ಪ್ರದರ್ಶನವನ್ನು ಧಾರವಾಡದಲ್ಲಿ ಏರ್ಪಡಿಸಿದ್ದರು.

ಆಗಸ್ಟ್ 27ರಂದು ಸಂಜೆ 7ಕ್ಕೆ ಪ್ರದರ್ಶನದ ಉದ್ಘಾಟನೆಯ ಸಮಾರಂಭ ನಡೆಯಿತು. ಸುಪ್ರಸಿದ್ಧ ಕಲಾವಿದರೂ ಮತ್ತು ಬಾಂಬೆ ಆರ್ಟ್ಸ್ ಸೊಸೈಟಿಯ ಉಪಾಧ್ಯಕ್ಷರೂ ಆದ ಶ್ರೀ ಹರೀಶ್ ರಾವುತ್‌ಅವರು ಪ್ರದರ್ಶನವನ್ನು ಉದ್ಘಾಟಿಸಿ ಶ್ರೀ ದೇಸಾಯಿ ಅವರ ಕಲೆಯ ಕುಶಲತೆಯನ್ನು ಮೆಚ್ಚುತ್ತಾ ಈ ರೀತಿಯ ಪ್ರದರ್ಶನಗಳು ಇನ್ನೂ ಹಲವಡೆಯಲ್ಲಿ ನಡೆಯಬೇಕು ಮತ್ತು ಹೆಚ್ಚು ಹೆಚ್ಚು ಜನರಿಗೆ ಈ ಕಲೆಯನ್ನು ನೋಡುವ ಅವಕಾಶ ದೊರೆಯಬೇಕು ಎಂದು ಹೇಳಿದರು. ಸಮಾರಂಭದ ಮುಖ್ಯ ಅಥಿತಿಗಳಾದ, ಮಹಾರಾಷ್ಟ್ರದ ವಿಧಾನ ಸಭೆಯ ಸದಸ್ಯರಾದ ಶ್ರೀಮತಿ ಚಂದ್ರಕಾಂತಾ ಗೋಯಲ್ ಅವರು ಮಹಾರಾಷ್ಟ್ರದಲ್ಲಿ ಗಣಪತಿ ಪೂಜೆಯ ವೀಶೇಷ ಸ್ಥಾನದ ಹಿನ್ನಲೆಯನ್ನು ತಿಳಿಸುತ್ತಾ, ಈ ಸಂದರ್ಭದಲ್ಲಿ ಸಂಗೀತ ಮತ್ತು ಕಲೆಗೆ ಮೈಸೂರು ಅಸೋಸಿಯೇಶನ್ನಿನಲ್ಲಿ ನೀಡುತ್ತಿರುವ ಪ್ರೋತ್ಸಾಹವನ್ನು ಪ್ರಶಂಶಿಸಿದರು.



ಶ್ರೀಮತಿ ಚಂದ್ರಕಾಂತ ಗೋಯಲ್ ಮತ್ತು ಶ್ರೀ ರಾವುತ್‌ರವರು ಪ್ರದರ್ಶನವನ್ನು ವೀಕ್ಷಿಸುತ್ತಿರುವುದು. ಹಿನ್ನಲೆಯಲ್ಲಿ ಶ್ರೀ ಎನ್. ಸಿ. ದೇಸಾಯ್

## ಅಭಿನಂದನೆ



ಶ್ರೀ ಅಜಿತ ಅವಿನಾಶರಾವ್ ಕುಲಕರ್ಣಿ

ಮುಂಬಯಿ ಕರ್ನಾಟಕ ಥಿಯೇಟರ್ಸ್‌ನ ಮಾಜಿ ನಿರ್ದೇಶರಾಗಿದ್ದ ಸದ್ಯ ಧಾರವಾಡದಲ್ಲಿರುವ ಶ್ರೀ ವೆಂಕಟೇಶ ದೇಶಪಾಂಡೆ ಇವರ ಮೊಮ್ಮಗ, ಶ್ರೀ ಅಜಿತ ಅವಿನಾಶರಾವ್ ಕುಲಕರ್ಣಿ ಇವರು ಈಸಲದ B. E. ಪದವಿಯಔದ್ಯಮಿಕ ವಿಭಾಗದಲ್ಲಿ ಕರ್ನಾಟಕ ವಿಶ್ವವಿದ್ಯಾಯಲಯಕ್ಕೆ ಮೊದಲನೆ ಸ್ಥಾನವನ್ನು ಗಳಿಸಿದ್ದಾರೆ. ಅಜಿತ್ ಅವರು ತಮ್ಮ ವಿದ್ಯಾಭ್ಯಾಸದ ಪ್ರತಿ ಘಟ್ಟಗದಲ್ಲಿಯೂ ಉತ್ತಮ ಅಂಕಗಳನ್ನು ಗಳಿಸಿದ್ದಾರೆ. 1984ರಲ್ಲಿ S. S. L. C. ಯಲ್ಲಿ ಗೋವಾ ಬೋರ್ಡಿಗೆ 19ನೇ ರ್‍ಯಾಂಕ್ ಪಡೆದಿದ್ದ, ಅಜಿತ್ ಸೇಂಟ್ ಜೋಸೆಫ್ ಹಾಯ್‌ಸ್ಕೂಲಿಗೆ ಮೊದಲಿಗರಾಗಿದ್ದರು. P. U. C. II ಪರೀಕ್ಷೆಯಲ್ಲಿ ದಿಲ್ಲೀ ಕನ್ನಡ ಉಚ್ಚಶ್ರೇ ಹಾಯ್‌ಸ್ಕೂಲಿನಿಂದ ಮೂರನೆ ಕ್ರಮಾಂಕದಲ್ಲಿ ಉತ್ತೀರ್ಣರಾದರು. ನಂತರ ಬೆಳಗಾವಿಯ Gogate Institute of technologyಯಲ್ಲಿ ಇಂಜಿನಿಯರಿಂಗ್ ಪದವಿಗೆ ಪ್ರವೇಶ ಪಡೆದು ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷವೂ ಕರ್ನಾಟಕ ಯೂನಿವರ್ಸಿಟಿಗೆ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ.

ಜಹವಸ ೧ ಪ ಕಾವ್ಯೋತ್ಸವ

"ಡೊಂಬಿವಿಲಿಯ ಮೈಸೂರು ಸಂಗೀತ ವಿದ್ಯಾನಿಲಯದ ಆಶ್ರಯದಲ್ಲಿ ಬರುವ ಅಕ್ಟೋಬರ್ 7ರಂದು ಕಾವ್ಯೋತ್ಸವನ್ನು ಏರ್ಪಡಿಸಲಾಗಿದೆ. ಉತ್ಸವದ ಅಂಗವಾಗಿ, ಕನ್ನಡ ಕಾವ್ಯಗಳ ವಿಚಾರ ಸಂಕಿರಣ, ಕವಿಸ್ಮರಣೆ, ಕಾವ್ಯಗಾಯನ, ಕವಿಗೋಷ್ಠಿ ಮತ್ತು ಕಾವ್ಯನಾಟಕದ ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಸುಪ್ರಸಿದ್ಧ ಹಿರಿಯ ಕವಿ ಚನ್ನವೀರ ಕಣವಿಯವರು ಈ ಉತ್ಸವದ ಅಧ್ಯಕ್ಷತೆಯನ್ನು ನಹಿಸುತ್ತಾರೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿದೇಶಕರು ಶ್ರೀ ಬಿ. ಪಾರ್ಥಸಾರಥಿಯವರು ಉತ್ಸವವನ್ನು ಉದ್ಘಾಟಿಸುತ್ತಾರೆ. ಅಕ್ಟೋಬರ್ 7ರಂದು ಡೊಂಬಿವಿಲಿಯ ಕುಲಕರ್ಣಿ ಮಂಗಲ ಕಾರ್ಯಾಲಯದಲ್ಲಿ ನಡೆಯುವ ಈ ಉತ್ಸವದಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಿ ಉತ್ಸವವನ್ನು ಯಶಸ್ವಿಗೊಳಿಸಬೇಕೆಂದು ವ್ಯವಸ್ಥಾಪಕರು ವಿನಂತಿಸಿಕೊಂಡಿರುತ್ತಾರೆ.

ವರದಿ : ನಾಗಭೂಷಣರಾವ್

# ಕಡಲಾಚೆಯ ಕರಿವದನ

- ಎಸ್. ಸಿ. ದೇಸಾಯಿ

ಗಣಪತಿ ವಿದೇಶಕ್ಕೆ ಹೋದದ್ದು ಯಾವಾಗ? ಹೇಗೆ? ಮತ್ತು ಯಾಕೆ? ಇವು ಕುತೂಹಲಕರ ಪ್ರಶ್ನೆಗಳು. ಕ್ರಿಸ್ತಶಕದ ಪ್ರಾರಂಭದಲ್ಲಿ ಬ್ರಾಹ್ಮಣರು ಧಾರ್ಮಿಕ ಕಾರಣಗಳಿಗಾಗಿ ವಿದೇಶಕ್ಕೆ ವಲಸೆ ಹೋಗತೊಡಗಿದ್ದು ನಿಜ. ಅದರ ಜೊತೆಯಲ್ಲೇ ಈ ಆರಾಧ್ಯದೇವತೆಯೂ ಕಡಲುದಾಟಿತೆ? ಇದೊಂದು ಊಹೆಯಾದರೆ, ಇದೊಂದು ಅಭಿಪ್ರಾಯದ ಪ್ರಕಾರ ಗಣಪತಿಯನ್ನು ವಿದೇಶಗಳಿಗೆ ಒಯ್ದುವರು ವ್ಯಾಪಾರಸ್ಥರು. ಸಾಮಾನು ಸರಂಜಾಮುಗಳೊಂದಿಗೆ ಹೊರಟ ವ್ಯಾಪಾರಿಗಳು ಜೊತೆಗೆ ವಿಘ್ನೇಶ್ವರನಿದ್ದರೆ ತಮಗೆ ಅಡ್ಡಿ ಆತಂಕಗಳು ಬಂದೊದಗುವುದಿಲ್ಲವೆಂಬ ನಂಬಿಕೆಯುಳ್ಳವ ರಾಗಿರಬೇಕು. ತೊಡಕಿನಿಂದ ಪಾರುಮಾಡುವ, ವಿಘ್ನನಾಶಕ, ಕ್ಷೇತ್ರಪಾಲಕ ಹಾಗೂ "ರಕ್ಷಕ" ಎಂಬ ಕಾರಣಕ್ಕಾಗಿಯೇ ಗಣೇಶನನ್ನು ಈ ವ್ಯಾಪಾರಿಗಳು ಕರೆದೊಯ್ದಿರಬೇಕು.

ಹೀಗೆ ಭಾರತಿಯರ ಜೊತೆಯಲ್ಲೇ ವಿದೇಶಗಳಿಗೆ ಹೋದ ವಿನಾಯಕ ಹೋದೆಡೆಗೆಲ್ಲಾ ಅಲ್ಲಿಯ ಜನರ ಭಕ್ತಿ ಗಳಿಸಿದ್ದು, ಕುತೂಹಲ ಕೆರಳಿಸಿದ್ದು ಮತ್ತು ಆರಾಧ್ಯಮೂರ್ತಿಯಾಗಿ ನೆಲೆಗೊಳಿಸಿದ್ದು ನಿಜಕ್ಕೂ ಆಶ್ಚರ್ಯಕರ.



ರಕ್ಷಾ ಗಣಪತಿ, ವಿಯಟ್ನಾಂ

## ಅಲ್ಲಿ ಆ ದೇಶಗಳಲ್ಲಿ!

ವಿನಾಯಕ ಆರಾಧನೆಯ ಪ್ರಭಾವಕ್ಕೊಳಗಾದ ದೇಶವಂದರೆ ಅಫಘಾನಿಸ್ತಾನ, ಚೀನಾ, ಜಪಾನ್, ಇಂಡೋನಿಸಿಯಾ, ಸಯಾಂ, ಬರ್ಮಾ, ಮಲಯಾ, ಜವಾ, ಬೋರ್ನಿಯೋ, ಸುಮಾತ್ರಾ, ಟಿಬೆಟ್, ನೇಪಾಳ ಮುಂತಾದವುಗಳು. ಆದರಲ್ಲೂ ೧೪ ಮತ್ತು ೧೫ನೇ ಶತಮಾನಗಳವರೆಗೂ ಈ ದೇಶಗಳಲ್ಲಿ ಗಣೇಶಾರಾಧರನೆ ವ್ಯಾಪಕವಾಗಿತ್ತೆನ್ನಲಾಗಿದೆ. ಇಲ್ಲಿ ಇತರ ಹಿಂದೂ ದೇವತೆಗಳ ಪೂಜೆ ನಡೆದಿದ್ದರೂ ಪ್ರಮುಖ ಆರಾಧ್ಯದೇವತೆ ಮಾತ್ರ ಗಣಪತಿಯೇ.

ಕ್ರಿಸ್ತಶಕ ೫ನೆಯ ಶತಮಾನಕ್ಕೂ ಮುಂಚೆಯೇ ಹಿಂದೂ ಧರ್ಮ ಬೋರ್ನಿಯಾದ ಜನಜೀವನಕ್ಕೆ ತಲುಪಿತ್ತು. ಇಲ್ಲಿನ 'ಕೋಟ್ಸ್' ಎಂಬಲ್ಲಿ ದೊರೆತ ಶಾಸನಗಳಲ್ಲಿ ಬ್ರಾಹ್ಮಣರ ಕೆಲ ಸ್ಪಷ್ಟ ವಿಧಿ ಉಲ್ಲೇಖವಿದೆ. ಅಲ್ಲದೆ "ಕೊಂಬಿಂಗ್"ಎಂಬಲ್ಲಿ ಗುಹೆಯೊಂದರಲ್ಲಿ ಅಸಂಖ್ಯಾತ ಹಿಂದೂ ಮತ್ತು ಬೌದ್ಧ ಶಿಲ್ಪಗಳು ದೊರಕಿದ್ದು. ಅವುಗಳಲ್ಲಿ ಸುಂದರವಾದ ಗಣೇಶ ಶಿಲ್ಪವೂ ಒಂದಿದೆ. ಹಿಂದೂ ವಿಗ್ರಹಗಳ ಪೈಕಿ ಹೆಚ್ಚನವು ಶೈವ ಪಂಥಕ್ಕೆ ಸೇರಿದಂತವು. ಬಹುಶಃ ಅನಾಗರಿಕ ಆಕ್ರಮಣಕಾರಿಗಳ ಕೈಗೆ ಬೀಳಬಾರದೆಂಬ ಕಾರಣಕ್ಕಾಗಿ ಈ ವಿಗ್ರಹಗಳನ್ನು ವಿವಿಧೆಡೆಗಳಿಂದ ಆಯ್ದು ತಂದು ಇಲ್ಲಿ ಶೇಖರಿಸಿರಬೇಕೆಂಬುದು ಇತಿಹಾಸಕಾರರ ಅಭಿಪ್ರಾಯ.

## ಜಪಾನಿನಲ್ಲಿ ಗಣಪ

ಜಪಾನದೊಳಗೆ ಗಣಪ ಹೆಜ್ಜೆಯಿಕ್ಕಿದ್ದು ಮಾತ್ರ ೯ನೆಯ ಶತಮಾನದ ನಂತರವೇ. ಇಲ್ಲಿ ಬೌದ್ಧಧರ್ಮೀಯನಾಗಿದ್ದ 'ಕುಸ್ಕೋಜಿಯೀಷಿ' ಎಂಬಾತನೇ ವರಸಿದ್ಧಿನಾಯಕನ ಪ್ರಪ್ರಥಮ ಆರಾಧಕ ಇಂಥವನೇ ಗಣಪತಿಪೂಜೆಗೆ ತೊಡಗಿದನೆಂಬ ಸುದ್ದಿ ತಿಳಿದ ಕೂಡಲೆ ಜನಸಾಮಾನ್ಯರು ಗಣಪತಿಗೆ ಮುಗಿಬಿದ್ದರು. ಮೋದಕಪ್ರೀಯನಿಗೆ ಜನಪ್ರಿಯತೆ ಲಭ್ಯವಾಯಿತು. ಅಂದು ಆ ಜನರ ಭಕ್ತಿಯ ಪ್ರತೀಕವಾಗಿ ಗಣೇಶಾರಾಧನೆಗೆ ಮಂದಿರಗಳೂ ನಿರ್ಮಾಣಗೊಂಡವು. ಎರಡು, ನಾಲ್ಕು, ಆರು ಹಸ್ತಗಳುಳ್ಳ ನಗೆಮೊಗದ ವಿನಾಯಕ ಶಿಲ್ಪಗಳು ಹುಟ್ಟಿಕೊಂಡವು. "ಕಾಕು-ಜೆನ್-ಜೋ" ಶೈಲಿಯ ಗಣಪ, ಮುಕ್ಕಣ್ಣ ವಿನಾಯಕ, ಮೂರು ತಲೆಯ ವಿಘ್ನೇಶ್ವರ ಶಿಲ್ಪಗಳು ರೂಪುಗೊಂಡವು. ನಾಲ್ಕು ಕೈಗಳಲ್ಲಿ ಖಡ್ಗ, ಕಂದಮೂಲ, ಮೋದಕ ಹಾಗೂ ಪ್ರಭುತ್ವದ ಚಿಹ್ನೆಯಾದ 'ದಂಡ' ಮುಂತಾದುವುಗಳಿಂದ ಅಲಂಕೃತನಾಗಿದ್ದಾನೆ.



ಶಕ್ತಿ ಗಣಪತಿ, ಬರ್ಮಾ

ಜಪಾನ್‌ನಲ್ಲಿನ ಗಣಪತಿಯ ಒಂದು ವಿಶಿಷ್ಟವೆಂದರೆ "ಕಾಂಗಿ-ತೆನ್"ಗಣಪತಿ. ಇಬ್ಬರೂ ಗಣಪತಿಗಳು ಒಬ್ಬರನ್ನೊಬ್ಬರು ಆಲಂಗಿಸಿಕೊಂಡ ರೂಪದಲ್ಲಿರುವ ಈ ಶಿಲ್ಪಕ್ಕೆ ಬಹಿರಂಗ ಪೂಜೆ ಮಾತ್ರ ಇಲ್ಲ!

## ಚೈನಾ-ಜಾವಗಳಲ್ಲಿ


ಇನ್ನೊಂದು ಅಚ್ಚರಿಯ ವಿಷಯವೆಂದರೆ ನಮ್ಮ ದೇಶಕ್ಕಿಂತಲೂ ಹಳೆಯದಾದ ವಿಗ್ರಹವೊಂದು ಚೀನಾದ "ಕುಂಗ್‌ಶಿಯಾಂಗ್" ಎಂಬಲ್ಲಿ ದೊರಕಿದ್ದು ಕ್ರಿಶ. ೫೩೧ರಲ್ಲಿ ನಿರ್ಮಾಣವಾದ ಈ ಉಬ್ಬು ಗಣಪತಿಯ ಶಿಲ್ಪ ಅತಿ ಪ್ರಾಚೀನವಾದುದೆಂದು ಭಾವಿಸಲಾಗಿದೆ. ಇತರ ಕೆಲವು ಪ್ರಾಚೀನ ಶಿಲ್ಪಗಳೂ ಅಲ್ಲಿ ಲಭ್ಯವಿದೆ.

ಇಂಥಹ ಅನೇಕ ಗಣಪತಿ ಮೂರ್ತಿಗಳು ಚೈನಾದಲ್ಲಿ ಕಾಣಬಹುದು. ಇಲ್ಲಿ ಕೂಡ ವಿನಾಯಕನಿಗೆ 'ರಹಸ್ಯ ಪೂಜೆ' ಸಲ್ಲುತ್ತದೆಯೇ ಹೊರತು ಬಹಿರಂಗ ಪೂಜೆ ಇಲ್ಲ. ೧೧೧೭ರಲ್ಲಿ ಚೀನದ ಚಕ್ರವರ್ತಿಯಾಗಿದ್ದ 'ಚಿನ್-ತ್ಸುಂಗ್' ರಾಜ

# ಕಡಲಾಚೆಯ ಕರಿವದನ

ಶಾಸನವೊಂದನ್ನು ಹೊರಡಿಸಿ ಗಣೇಶನ ಮೂರ್ತಿ ಪೂಜೆಯನ್ನು ನಿಷೇಧಿಸಿದ್ದೇ ಇದಕ್ಕೆ ಕಾರಣ.

ಜಾವಾ ಮತ್ತು ಭಾರತದ ನಂಟು ತೀರ ಹಳೆಯದು. ರಾಮಾಯಣ ಗ್ರಂಥದಲ್ಲೂ ಜಾವಾ ಬಗ್ಗೆ ಉಲ್ಲೇಖಗಳಿವೆ. ಗುಪ್ತರ ಕಾಲದ ಹೊತ್ತಿಗೆ ಇಲ್ಲಿ ತೀವ್ರವಾದ ಹಿಂದೂ ಧರ್ಮ ಪ್ರಚಾರ ಪ್ರಾರಂಭವಾಗಿರಬೇಕು. ಆದರೂ ಇಲ್ಲಿ ಗಣೇಶನಿಗೆ ಪ್ರತ್ಯೇಕ ಪೂಜಾಗೃಹಗಳು ನಿರ್ಮಾಣವಾಗಲಿಲ್ಲ. ಕೆಲವು ಶಿವನ ಮಂದಿರಗಳಲ್ಲಿ ಮಾತ್ರ ಗಣಪ್ಪ ಗೂಡು ಹೊಕ್ಕು ಕೂತಿದ್ದಾನೆ.



*ನಾಗಬಂಧ ಗಣೇಶ, ಅಫಘಾನಿಸ್ತಾನ*

ಪಶ್ಚಿಮ ಜಾವದಲ್ಲಿ ದೊರೆತ ಗಣಪತಿ ಶಿಲ್ಪವೊಂದು ಅತಿ ಪ್ರಾಚೀನವಾದುದು. ಈ ಶಿಲ್ಪ ಕೋಮಲವಾಗಿರದೆ, ಲಾವಣ್ಯ ಕಾಣದೆ ಒರಟಾಗಿಯೇ ಇದೆ. ಈ ಕಾರಣಕ್ಕಾಗಿಯೇ ಇದು ಪ್ರಾಚೀನ ಶಿಲ್ಪವೆಂದು ಪರಿಗಣಿಸಲ್ಪಟ್ಟಿರಬೇಕು.

ಜಾವಾದ ಗಣಪತಿ ಮೂರ್ತಿಗಳಲ್ಲಿ ಕೊರಳ ಸುತ್ತ ಕಪಾಲ (ತಲೆಬುರುಡೆ) ಹಾರ ಹಾಕಿರುವ ಸೋಜಿಗವನ್ನು ಕಾಣಬಹುದು. ಬಹುಶಃ ಭೈರವ ಸಂಪ್ರದಾಯಿಗಳು ಕೊಟ್ಟ ರೂಪವಿದಾಗಿರಬೇಕು. "ಬಾಲಿ"ದೇಶದಲ್ಲೂ ಜಾವಾ ಛಾಯೆ ಕಂಡುಬರುತ್ತದೆ. ರಾಜವಂಶದ ಗಣ್ಯವ್ಯಕ್ತಿಗಳ ನಿಧನಾನಂತರ ಅವರ ಪ್ರತಿಮೆಗಳನ್ನು ನಿರ್ಮಿಸುವಾಗ ಮಧ್ಯೆ ಮಧ್ಯೆ ಗಣೇಶ ವಿಗ್ರಹಗಳನ್ನು ಕಟೆದಿರುವುದು ಇಲ್ಲಿ ಕಂಡು ಬರುತ್ತದೆ. ಮರಣೋತ್ತರಸಂಕಷ್ಟಗಳ ನಿವಾರಣೆಯ ಬೇಡಿಕೆಯೇನೋ!

ಕಾಂಬೋಡಿಯಾ (ಅಂದಿನ ಕಾಂಬೋಜ)ದಲ್ಲಿ ಪ್ರತಿಮಾ ಶಿಲ್ಪಸಂಬಂಧಿ ಅವಶೇಷಗಳ ಮಧ್ಯೆ ಹೇರಳವಾಗಿ ಹಿಂದೂ ಶಿಲ್ಪಗಳು, ಬೌದ್ಧ ಮೂರ್ತಿಗಳು ಮೂರ್ತಿಗಳು ಗೋಚರಿಸುತ್ತವೆ. ಪ್ರಶಾಂತ್ ಬಾಕ್‌ನಲ್ಲಿ ಗಣೇಶಪೂಜೆಗಾಗಿ ದೇವಾಲಯವೊಂದಿತ್ತೆಂಬುದು ನಿರ್ವಿವಾದ ಅಂಶ. ಗಣೇಶನನ್ನು ಇಲ್ಲಿನ ಜನ "ಪ್ರಾಸ್‌ಕೆನರ್"ಅನ್ನುತ್ತಾರೆ. ಸ್ಮೀಕ್‌ತ್ಮಾರ್ ಕೆಂಡಲ್ ಎಂಬಲ್ಲಿ ಖಾಸಗಿ ಸಂಗ್ರಹವೊಂದರಲ್ಲಿ ಗಮನಾರ್ಹಮೂರ್ತಿಯೊಂದಿದೆ. ಪದ್ಮಾಸನ, ಚತುರ್ಮುಖಿ, ಒಂದೇ ಕಿರೀಟ, ಎರಡು ಕೈಗಳು ಇರುವ ಈ ವಿಶೇಷ ಮೂರ್ತಿ ಭಾರತದಲ್ಲಿನ ಶಿಲ್ಪವೊಂದನ್ನು ಹೋಲುತ್ತದೆ. ರಾಜಸ್ಥಾನದ ಘಡಿಯಾಲ್ ದೇವಾಲಯದ ಕಂಬದ ತುದಿಯಲ್ಲಿ ಪ್ರಧಾನ ದಿಕ್ಕುಗಳಿಗೆ ಅಭಿಮುಖವಾಗಿ ಇದೇ ರೀತಿಯ ಗಣಪತಿ ಕೆತ್ತಲ್ಪಟ್ಟಿದೆ.

## ಗಣೇಶನ ಅಂಚೆ ಚೀಟಿ

ಥೈಲಾಂಡ್ ಹಾಗೂ ಬರ್ಮಾಗಳಲ್ಲೂ ಸಾಕಷ್ಟು ಗಣೇಶ ಶಿಲ್ಪಗಳಿವೆ. ಹೆಚ್ಚಿನ ಸಂಖ್ಯೆಯಲ್ಲಿ ಬ್ರಾಹ್ಮಣರು ವಲಸೆ ಹೋದುದು ಈ ದೇಶಗಳಿಗೆ. ಪ್ರಾಯಶಃ ಅವರೊಂದಿಗೆ ಶಿಲ್ಪಗಳೂ ಕಡಲು ದಾಟಿರಬಹುದು. ದಕ್ಷಿಣ ಬರ್ಮಾದಲ್ಲಿ ಸಿಕ್ಕ ಶಿಲ್ಪಿಗಳ ಸಂಖ್ಯೆಯೇ ಅಲ್ಲಿ ಗಣೇಶಾರಾಧನೆ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ನೆರೆ ರಾಷ್ಟ್ರವಾದ ಶ್ರೀಲಂಕಾದ ಪೋಲನ್ನುವಾರು ಶಿವದೇವಾಲಯದಲ್ಲಿ ಕಂಬದ ಮೇಲೆ ಸುಂದರವಾದ ಗಣನಾಯಕನ ಮೂರ್ತಿ ಕೆತ್ತಲಾಗಿದೆ. ಕೊಲಂಬೋದಿಂದ ೧೫೦ ಮೈಲು ದೂರದ 'ಕಟರ್' ಗ್ರಾಮದಲ್ಲಿರುವ ಸುಬ್ರಹ್ಮಣ್ಯ ದೇವಾಲಯದಲ್ಲಿ ಗಣೇಶನಿಗೆ ಪ್ರತ್ಯೇಕ ಸ್ಥಾನ. ಅಲ್ಲಿ ಬಹಿರಂಗ ಪೂಜೆಯೂ ನಡೆದಿದೆ.

ಗಣೇಶನ ಹೆಸರಿನಲ್ಲೇ ಅಂಚೆಚೀಟಿಯೊಂದನ್ನು ಲಾವೋಸ್ ಸರಕಾರ ಹೊರಡಿಸಿದೆಯೆಂದರೆ, ಅಲ್ಲಿ ವರಸಿದ್ಧಿವಿ ನಾಯಕನ ಜನಪ್ರಿಯತೆ ಎಷ್ಟಿದ್ದೀತೆಂದು ನೀವೇ ಊಹಿಸಿ.

## ಗ್ರೀಕ್ ಶೈಲಿಯ ಗಣಪ

ಅಫಘಾನಿಸ್ಥಾನದಲ್ಲಿ ಈ ಗಣೇಶನ ಪೂಜೆ, ಆರಾಧನೆಯನ್ನು ತಿಳಿಸುವ ಹಲವಾರು ಮೂರ್ತಿ ಶಿಲ್ಪಗಳು ಲಭ್ಯವಾಗಿವೆ. ಇತ್ತೀಚೆಗೆ ದೊರೆತಿರುವ ಎರಡು ಮೂರ್ತಿಗಳು ಈ ವಿಷಯದಲ್ಲಿ ಸ್ಥಿರವಾದ ನಂಬಿಕೆಯನ್ನು ಕಲ್ಪಿಸಲು ಅನುಕೂಲವಾಗಿವೆ. ಒಂದು ೬ನೇ ಶತಮಾನಕ್ಕೆ ಸಂಭಂಧಿಸಿದ ಶಾಸನಗಳೊಂದಿಗಿದ್ದ ಈ ಮೂರ್ತಿ ಚಂದ್ರಕಾಂತ ಶಿಲೆಯದು. ಗ್ರೀಕ್ ಮತ್ತು ಭಾರತೀಯಸಮ್ಮಿಶ್ರ ಶೈಲಿಯಲ್ಲಿ ನಿರ್ಮಾಣವಾದ ಈ ಶಿಲ್ಪ ಬಲಗಾಲವನ್ನು ಮುಂದಿರಿಸಿದೆ. ಪಾದ ಭಿನ್ನವಾಗಿದೆ. ಎಡಮುರಿಯಸೊಂಡಿಲೂ ಮುರಿದಿದೆ. ದಂತವೂ ಮುರಿದಿದೆ. ಚಿಕ್ಕದಾದರೂ ಚೊಕ್ಕ ಕಿರೀಟ, ಟೊಂಕದ ಮೇಲಿನ ಭಾಗದ ದೇಹ ತುಸು ದೊಡ್ಡದೆನಿಸುತ್ತದೆ. ನಿಂತಿರುವ ಭಂಗಿ ಮಾತ್ರ ರಮ್ಯವಾಗಿದೆ. ನಾಲ್ಕು ಕೈಗಳಲ್ಲಿ ಎರಡು ಭಿನ್ನವಾಗಿವೆ. ಇದಲ್ಲದೆ ೫ನೇ ಶತಮಾನಕ್ಕೆ ಸೇರಿದ ಇನ್ನೊಂದು ಮೂರ್ತಿಯೂ ದೊರೆತಿದೆ. ನೇಪಾಲ ನಮ್ಮ ನೆರೆಯ ದೇಶ. ಅಲ್ಲಿ ಹಿಂದುಗಳು, ಬೌದ್ಧರು ಗಣಪತಿಯನ್ನು ಆರಾಧಿಸುವ ರೂಢಿ.

ಇಲ್ಲಿಯ ಹೇರಂಬಾ ಗಣೇಶಮೂರ್ತಿಯು ಪ್ರಸಿದ್ಧವಾದುದು. ಪಂಚಮುಖಿ, ದಶಹಸ್ತ, ಶಿಂಹವಾಸನ. (ಬದಿಗೆ ಇಲಿಯೂ ಉಂಟು) ತೊಡೆಯ ಮೇಲೆ ಶಕ್ತಿಯಿರುವ ಈ ಮೂರ್ತಿ ಬಹು ಅಂದವಾಗಿದೆ. ನೇಪಾಳದಲ್ಲಿ ಅಲ್ಲಲ್ಲಿ ಗಣೇಶ ದೇವಾಲಯಗಳುಂಟು.

ಹೀಗೆ ಗಣಪತಿ ಸರ್ವಾಂತರ್ಯಾಮಿ! ಸರ್ವಪೂಜಿತ. !

## ಮುಂಬಯಿ ವಿ. ವಿ. ಕನ್ನಡ ವಿಭಾಗಕ್ಕೆ ಮುಖ್ಯಸ್ಥರ ನೇಮಕ

ಡಾ. ತಾಳ್ತಜೆ ವಸಂತಕುಮಾರ ಅವರನ್ನು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಶ್ರೀಯುತರು ಕಳೆದೊಂದು ವರ್ಷದಿಂದ ವಿಭಾಗದ ಕಾರ್ಯನಿರತ ಮುಖ್ಯಸ್ಥರಾಗಿದ್ದರು.

ಡಾ. ತಾಳ್ತಜೆಯವರು ಬೆಂಗಳೂರಿನ ವಿ. ವಿ. ಯಿಂದ (ಪ್ರಥಮ ಶ್ರೇಣಿ ಸುವರ್ಣ ಪದಕ ಸಹಿತ)ಮಂಗಳೂರು ವಿ. ವಿ. ಯಿಂದ ಪಿ. ಎಚ್. ಡಿ. ಪದವಿಗಳನ್ನು ಹೊಂದಿದ್ದು, ಈವರೆಗೆ ಎಂಟು ಕೃತಿಗಳನ್ನು ಪ್ರಕಟಿಸಿದ್ದಾರೆ. ವಿವೇಕಾನಂದ ಕಾಲೇಜು, ಪುತ್ತೂರು ಇಲ್ಲಿ ಹದಿನಾದು ವರ್ಷಗಳು ಪ್ರಾಧ್ಯಾಪಕರಾಗಿದ್ದು 1986ರಿಂದ ಮುಂಬಯಿ ವಿ. ವಿ. ಯ ಸೇವೆಯಲ್ಲಿದ್ದಾರೆ ಇವರ ಮಾರ್ಗದರ್ಶನದಲ್ಲಿ ಈವರೆಗೆ ಇಬ್ಬರು ತಮ್ಮ ಪಿ. ಎಚ್. ಡಿ. ಗಳಿಸಿದ್ದಾರೆ. ಪ್ರಕೃತ ಇವರು ಯು. ಜಿ. ಸಿ. ನೆರವಿನೊಂದಿಗೆ ಜನಪದ ಐತಿಹ್ಯಗಳ ಅಧ್ಯಯನ ಯೋಜನೆಯೊಂದನ್ನು ಕೈಗೊಂಡಿದ್ದಾರೆ.

# ಕನ್ನಡ ವನಿತಾ ಸಮಾಜಕ್ಕೆ ಮುಖ್ಯಮಂತ್ರಿಗಳ ಭೇಟಿ

ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಕಳೆದತಿಂಗಳ ಕೊನೆಯ ದಿನದಂದು (31-8-90) ವರ್ಲಿಯಲ್ಲಿರುವ "ಕನ್ನಡ ವನಿತಾಸಮಾಜಕ್ಕೆ" ಭೇಟಿ ನೀಡಿದರು. ಶ್ರೀಮತಿ ಲಲಿತ ಬಾಲು, ಶ್ರೀಮತಿ ಭಾರತಿ ಪ್ರಸಾದ್, ಹಾಗೂ ಶ್ರಮತಿ ಮಧುನಂದಾ ಅವರು ಕಾರ್ಯರಂಭದ ಮೊದಲಿಗೆ "ಜೈ ಕರ್ನಾಟ ಮಾತೆ" ಹಾಡಿ ಶ್ರೀ ಪಾಟಿಲರಿಗೆ ಸ್ವಾಗತ ಕೋರಿದರು. ಕನ್ನಡ ವನಿತಾ ಸಮಾಜವು ಈ ವರ್ಷ ಬೆಳ್ಳಿಹಬ್ಬವನ್ನು ಆಚರಿಸುತ್ತಿರುವ ಸಮಯದಲ್ಲಿ ಶ್ರೀ ಪಾಟಿಲರು ತಮ್ಮ ಸಂಸ್ಥೆಗೆ ಭೇಟಿ ನೀಡಿದ್ದು ತುಂಬಾ ಮಹತ್ವದ ವಿಷಯವೆಂದು ತಿಳಿಸುತ್ತ ವನಿತಾ ಸಮಾಜದ ಅಧ್ಯಕ್ಷಿಣಿಯಾದ ಶ್ರೀಮತಿ ಮೀರಾ ಕುಲಕರ್ಣಿಯವರು ಅತ್ಯಂತ ಉತ್ಸಾಹದಿಂದ ಶ್ರೀ ಪಾಟೀಲರಿಗೆ ಸಮಾಜದ ಚಟುವಟಿಕೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಿದರು. ಸಮಾಜವು ಆರಂಭವಾದ ಸಂದರ್ಭದಿಂದ ಹಿಡಿದು ಇಲ್ಲಿಯ ವರೆಗೆ ಬೆಳೆದು ಬಂದ ಬಗೆಯನ್ನು ತಿಳಿಸುತ್ತ ಶೀಮತಿ ಮೀರಾ ಅವರು ಹಿಂದೆಯೂ ಶ್ರೀ ಪಾಟೀಲರು ಕರ್ನಾಟಕ ಮುಖ್ಯಮಂತ್ರಿಗಳಾಗಿದ್ದಾಗ ಸಮಾಜಕ್ಕೆಸಹಾಯ ನೀಡಿದ್ದ ವಿಷಯವನ್ನು ನೆನಪಿಸಿದರು.

ಬೆಳ್ಳಿಹಬ್ಬ ಸಮಿತಿಯ ಅಧ್ಯಕ್ಷತೆ ವಹಿಸಿರುವ ಶ್ರೀಮತಿ ಜಯಾ ರಾವ್ ಅವರು ಬೆಳ್ಳಿಹಬ್ಬದ ಆಚರಣೆಯ ಅಂಗವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುತ್ತಾ ಈ "ಸಮಾಜ"ದಲ್ಲಿ ಕೇವಲ ಕನ್ನಡಿಗರೇ ಅಲ್ಲದೆ ಇತರ ಭಾಷೆಯ ಮಹಿಳೆಯರೂ ಸದಸ್ಯೆರಾಗಿದ್ದು "ಸಮಾಜ"ದ ಉನ್ನತಿಗಾಗಿ ದುಡಿಯುತ್ತಿರುವುದನ್ನು ವಿಶದಪಡಿಸಿದರು. ಕರ್ನಾಟಕ ಪ್ರಾಂತ್ಯದ ಹೊರಗಿರುವ ನಾವು ಯಾವ ಪ್ರಾಂತ್ಯದಲ್ಲಿರುತ್ತೇವೋ ಅಲ್ಲಿನ ಜನರೊಂದಿಗೆ ಸಮರಸದಿಂದ ಬಾಳಬೇಕಾದುದು ನಮ್ಮ ಧರ್ಮವಾದ್ದರಂದ ಇಲ್ಲಿ ಭಾಷಾ ಭೇಧಕ್ಕೆ ಎಡೆಯಿಲ್ಲವೆಂದರು. ಹಾಗೆಯೇ ಎಲ್ಲರಿಗೂ ಕನ್ನಡ ತಿಳಿಯಲಾರದೆಂದು ತಮ್ಮ ಮಾತುಗಳನ್ನು ಮರಾಠಿಯಲ್ಲಿಯೂ ತಿಳಿಸಿದರು.

ಶ್ರೀ ಪಾಟೀಲರು ಮಾತನಾಡುತ್ತಾ ಕನ್ನಡಿಗರು ಎಲ್ಲಿದ್ದರೂ ಆ ಪ್ರದೇಶಕ್ಕೆ ಹೇಗೆ ಒಗ್ಗಿಕೊಂಡು ಹೋಗುತ್ತಾರೆ ಎಂಬುದಕ್ಕೆ ಉದಾಹರಣೆಯಾಗಿ ತಮ್ಮ ಬಾಲ್ಯ ಜೀವನದ ದಿನಗಳನ್ನು ನೆನಪುಮಾಡಿಕೊಂಡರು. ಕರ್ನಾಟಕ ಏಕೀಕರಣದ ಮೊದಲು ಗುಲ್ಬರ್ಗಾ ಜಿಲ್ಲೆಯು ನಿಜಾಮರ ಆಡಳಿತದಲ್ಲಿದ್ದುದರಿಂದ ಅಲ್ಲೆಲ್ಲಾ ಕೇವಲ ಉರ್ದೂ ಭಾಷೆಯೇ ಪ್ರಚಾರದಲ್ಲಿತ್ತಂದೂ, ಮನೆಯಲ್ಲಿ ಕನ್ನಡವನ್ನು ಉಳಿಸಿಕೊಂಡು ಬಂದಿದ್ದರೆ ಅದು ತಮ್ಮ ತಾಯಿ ಹಾಗೂ ಅವರಂತೆಯೇ ಇತರ ಕನ್ನಡ ಕುಟುಂಬಗಳಲ್ಲಿ ತಾಯಿಯವರ ಪ್ರಭಾವದಿಂದಲೇ ಎಂದೂ ತಿಳಿಸಿದರು.

ಮುಂಬಯಿಯನ್ನು ಹಣದ ನಗರವೆಂದು ನೆನಪಿಸುತ್ತಾ ಇಲ್ಲಿ ಒಳ್ಳೆಯ ಕೆಲಸಮಾಡಲು ಮುಂದೆ ಬರುವವರಿಗೆ ಎಂದೂ ಹಣದ ಅಡಚಣೆಯಿಂದ ಕೆಲಸ ನಿಲ್ಲಿಸಬೇಕಾಗುವ ಸಂದರ್ಭ ಬರಲಾರದೆಂದೂ, ದಾನಿಗಳು ಸಿಕ್ಕೇ ಸಿಗುತ್ತರೆಂದೂ ತಿಳಿಸಿದರು. ಹಾಗೆಯೇ "ಲಿಜ್ಜತ್ ಪಾಪಡ್"ನ ಉದಾಹರಣೆಯನ್ನು ಕೊಡುತ್ತಾ ಹೇಗೆ ಮಹಿಳೆಯರ ಸ್ವಪ್ರಯತ್ನ ಹಾಗೂ ಪರಿಶ್ರಮದಿಂದ ಒಂದು ಮಹಾನ್ ಸಂಸ್ಥೆ ಬೆಳೆದು ಬಂತೋ ಹಾಗೆಯೇ "ಸಮಾಜ"ದ ಸದಸ್ಯೆಯರೂ ಪ್ರಯತ್ನ ಪಟ್ಟರೆ "ಸಮಾಜ"ವನ್ನು ಒಂದು ಅಂತರಾಷ್ಟ್ರೀಯ ಖ್ಯಾತಿಯ ಮೇರೆ ತಲುಪುವಂತೆ ಮಾಡಬಹುದೆಂದು ವಿಶ್ವಾಸ ವ್ಯಕ್ತ ಪಡಿಸಿದರು. "ಸಮಾಜ"ದ ಉತ್ತಮ ಕೆಲಸ ಕಾರ್ಯಗಳನ್ನು ಶ್ಲಾಘಿಸುತ್ತಾ ಕರ್ನಾಟಕ ಸರ್ಕಾರ ಮಹಿಳೆಯರ ಸಲುವಾಗಿ ಹಮ್ಮಿಕೊಂಡಿರುವ ಅನೇಕ ಯೋಜನೆಗಳ ಬಗ್ಗೆ ತಿಳಿಸಿಕೊಟ್ಟರು. ದುಡಿಯುವ ಮಹಿಳೆ ಎದುರಿಸುವ ಕಷ್ಟಗಳನ್ನು ಉದರಿಸುತ್ತ ಅವುಗಳ ನಿವಾರಣೆಗಾಗಿ ಹಾಕಿಕೊಂಡಿರುವ ಯೋಜನೆಗಳಲ್ಲಿ ಒಂದು ನಿವಾಸವಸತಿ ವ್ಯವಸ್ಥೆಗಾಗಿ ಬೆಂಗಳೂರಿನ ಯಲಹಂಕಾದ ಬಳಿ ಒಂಟಿ ಮಹಿಳೆಯರಿಗಾಗಿ ವಸತಿಯ "ಕಾಲೋನಿಗಳನ್ನು" ನಿರ್ಮಿಸುತ್ತಿರುವುದಾಗಿಯೂ, ಸರಕಾರಿ ಕೆಲಸಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರನ್ನು ನಿಯುಕ್ತಿ ಗೊಳಿಸುವುತ್ತಿರುವುದಾಗಿಯೂ, ಹಾಗೂ ಕಾನೂನಿನ ಪ್ರಕಾರ ತಂದೆ ತಾಯಿಯವರ ಆಸ್ತಿಯಲ್ಲಿ ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಸಮಾನ ಆಸ್ತಿ ಸಿಗುವಂತೆ ಮಾಡುವ ಪ್ರಯತ್ನದಲ್ಲಿರುವುದಾಗಿಯೂ ತಿಳಿಸಿದರು.

ತಮ್ಮ ಮಾತಿನ ಮುಕ್ತಾಯಕ್ಕೆ ಬರುತ್ತಾ ಶ್ರೀ ಪಾಟೀಲರು ಕರ್ನಾಟಕ ಸರಕಾರದ ಪರವಾಗಿ ತಾವು ತಮ್ಮಿಂದಾದ ಸಹಾಯ ಸಹಕಾರವನ್ನು ಸಮಾಜಕ್ಕೆ ಕೊಡುವುದಾಗಿ ಹೇಳಿದರಲ್ಲದೆ, "ಸಮಾಜ"ದ ವಾಚನಾಲಯಕ್ಕೆ ಬೇಡಿದ ಕನ್ನಡಪುಸ್ತಕಗಳನ್ನು ದೇಣಿಗೆಯಾಗಿ ಕಳಿಸಿಕೊಡುವುದಾಗಿಯೂ ಭರವಸೆ ಕೊಟ್ಟರು. ಹಾಗೆಯೇ ಯಾವುದಾದರೂ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕರ್ನಾಟಕದಿಂದ ಕಲಾವಿದರ ತಂಡವನ್ನು ಕರೆಸುವ ವಿಚಾರವಿದ್ದಲ್ಲಿ ಅವರಿಗೆ ತಿಳಿಸಿದರೆ ಅವರು ಸರ್ಕಾರದ ಖರ್ಚಿನಲ್ಲಿ ಆ ತಂಡವನ್ನು ಕಳುಹಿಸಿಕೊಡಲು ಸಿದ್ಧರಾಗಿದ್ದಾರೆಂದೂ ತಿಳಿಸಿದರು.

ಕೊನೆಯದಾಗಿ ವಂದಾನಾರ್ಪಣೆಮಾಡುತ್ತ ಶ್ರೀಮತಿ ಉಷಾ ಜೈರಾಂ ಅವರು ತಮ್ಮಲ್ಲಿ ಕೆಲಸ ಮಾಡುವ ಉತ್ಸಾಹಿ ಕಾರ್ಯಕರ್ತೆಯರಿಗೆ ಕೊರತೆಯಿಲ್ಲವೆಂದೂ, ಹಣ ಸಂಗ್ರಹ ಮಾಡುವುದರಲ್ಲಿಯೂ ಅವರು ಹಿಂದೆ ಬೀಳುವವರಲ್ಲವೆಂದೂ ತಿಳಿಸಿದರು. ಈಗ "ಸಮಾಜ" ಎದುರಿಸುತ್ತರುವ ಮುಖ್ಯ ಸಮಸ್ಯೆ ಎಂದರೆ ಜಾಗವೆಂತಲೂ ಆದಕ್ಕಾಗಿ ಮಾನ್ಯ ಪಾಟೀಲರು ಇಲ್ಲಿನ ಸರಕಾರದೊಂದಿಗೆ ಮಾತನಾಡಿ ಮುಂಬಯಿನಲ್ಲಿ ಎಲ್ಲರೂ ಬಂದು ಕೂಡಿಕೊಳ್ಳಲು ಆಗುವಂಥ ಮಧ್ಯಸ್ಥವಾದ ಪ್ರದೇಶದಲ್ಲಿ ಒಳ್ಳೆಯ ಜಾಗವೊಂದನ್ನು ಕೊಡಿಸಿಕೊಟ್ಟರೆ "ಸಮಾಜ" ತನ್ನ ಸ್ವಂತ ಕಟ್ಟಡಕಟ್ಟಿಕೊಂಡು ಒಳ್ಳೆಯ ಭರದಿಂದ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಲು ಅನುಕೂಲವಾಗುತ್ತೆಂದು ತಮ್ಮ ಮನವಿಯನ್ನು ಸಲ್ಲಿಸಿದರು.


## KANNADA VANITA SAMAJA

Proudly presents
A Festival of Four Plays
in different Languages
as a part of its
**Silver Jubilee Celebrations**
at Ravindra Natya Mandir, Prabhadevi

18-9-90 TUESDAY at 7-00 p. m.
**Ranga Prapanch Om Natyagandha**
Presents a Play in Marathi
"AYEE RETIRE HOTEY"
Written by : Ashok Patole,
Directed By : Dilip Kolhatkar
Starring : Bhakti Barve Inamdar

19-9-90 WEDNESDAY at 7-00p. m.
**Mysore Association Presents a Play in Kannada**
"VIDYABHASA"
Written & Directed by : Gita Vishwanath

20-9-90 THURSDAY at 7-30 p. m.
**Taranga Presents a Play in Kannada**
"AVINASHA"
Written by : Shanta Gokhale,
Translated by : Santosh Ballal
Directed by : Kishori Ballal

21-9-90 FRIDAY at 7-30 p. m.
**Naatak Company Presents a Play in Hindi**
"TURANDOT"
Urf
"Cheena Ki Hasina Ki Paheliyan"
Written by : Schiller
Translated & Directed by : Aatul Tiwari
Starring : Sushmita Mukherjee,
Raja Bundela

**Seasons Tickets : Rs. 40/- Rs. 25/- Rs. 10/- (Balcony)**
*Tickets are available at the SAMAJA, 515/A, Three View, Veer Savarkar Marg, Prabhadevi, Bombay-400 025.*
*Telephone : 4224175.*

Regn. No. 040015/86
Regn. No. MH/BY/NE121/89



## ಕರ್ನಾಟಕ ಸಾಧನೆ - ಪ್ರಗತಿಗೆ ನಾಂದಿ
## ಸ್ವಾತಂತ್ರ್ಯ ದಿನಾಚರಣೆ ಉತ್ತಮ ಮತ್ತು ಆಶಾದಾಯಕ ಭವಿಶ್ಯಕ್ಕಾಗಿ ಅಲ್ಪವಾಧಿಯಲ್ಲೇ ವಿನೂತನ ಕ್ರಮಗಳು

ಕರ್ನಾಟಕದ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯನ್ನು ವಹಿಸಿಕೊಂಡಾಗ ಮುಂದಿದ್ದ ಸಮಸ್ಯೆಗಳು ದಿಗ್ಭ್ರಮೆ ಉಂಟು ಮಾಡಿದವು. ಆರ್ಥಿಕ ಸಂಯಮ ಮತ್ತು ಕ್ರೀಯಾತ್ಮಕ ಕಾರ್ಯ ವೈಖರಿ ಮೂಲಕ ಪರಿಸ್ಥಿಯನ್ನು ನಿಭಾಯಿಸಿ ರಾಜ್ಯಕ್ಕೆ ಹೊಸ ಆಯಾಮ ನೀಡಿ ಜನತೆಯ ಜೀವನ ಸಮೃದ್ಧವಾಗುವಂತೆ ಮಾಡಲಾಗುತ್ತಿದೆ.

ಶೇಂದಿ ಮಾರಾಟದಿಂದ ಬೊಕ್ಕಸ್ಸೆ 60 ಕೋಟಿ ರೂ. ನಷ್ಟವಾದರೂ 'ಸೆಕೆಂಡ್ಸ್'ಮಧ್ಯ ಮಾರಾಟ ರದ್ದು, ಸಾರಾಯಿ ಮಾರಾಟ ಕರಹೆಚ್ಚಳ, ಮಾರಾಟ ತೆರಿಗೆ, ಸಾರಿಗೆ ಶುಲ್ಕ ಸ್ಟಾಂಪ್ಸ್ ಹಾಗೂ ನೋಂದಣಿ ಶುಲ್ಕಗಳ ಪರಿಣಾಮಕಾರಿ ಸಂಗ್ರಹದಿಂದಾಗಿ 550 ಕೋಟಿ ರೂ. ಹೆಚ್ಚಿನ ಆದಾಯ ಲಭಿಸಿದೆ. ಈ ಹಿನ್ನಲೆಯಲ್ಲಿ 631.90 ಕೋಟಿಹೆಹೊ ರೂ. ಹಳೇಬಾಕಿ ತೀರಿಸಿ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಜೊತೆಗೆ ಸರ್ಕಾರಿ ವೆಚ್ಚದ ಸಾಧಕ-ಭಾಧಕಗಳ ಸಮೀಕ್ಷೆಗೆ ರಾಜ್ಯ ಹಣಕಾಸು ಮಂಡಳಿಯನ್ನು ಸಹ ಸ್ಥಾಪಿಸಿದೆ.

ರಾಜ್ಯದಲ್ಲಿ ದಕ್ಷ ಹಾಗೂ ಸ್ವಚ್ಛ ಆಡಳಿತ ನೀಡುವ ದೃಷ್ಟಿಯಿಂದ ಕೆಲವು ಬಿಗಿ ಕ್ರಮ ತೆಗೆದು ಕೊಂಡು ಆಡಳಿತ ಯಂತ್ರಕ್ಕೆ ಪುನಶ್ಚೇತನ ನೀಡಲಾಗಿದೆ. ಭ್ರಷ್ಟಾಚಾರಿ, ನಿರುಪಯೋಗಿನೌಕರರನ್ನು ನಿವೃತ್ತಿಗೊಳಿಸುವ ಇಲ್ಲವೆ ವಜಾಗೊಳಿಸುವ ಕ್ರಮಕ್ಕಾಗಿ ಶ್ರೇಷ್ಠ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಪರಿಶೀಲನಾ ಸಮಿತಿ ಸ್ಥಾಪನೆ ಮಾಡಲಾಗಿದೆ.

ಕೊಂಕಣರೈಲುಮಾರ್ಗ ಕರಾವಳಿ ಪ್ರದೇಶಗಳ ವಾಣಿಜ್ಯ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಸಹಕಾರಿಯಾಗುವುದರ ಜೊತೆಗೆ ಮಂಗಳೂರು ಮುಂಬೈ ನಡುವೆ 1050 ಕಿ. ಮೀ. ದೂರ ಕಡಿಮೆಯಾಗಲಿದೆ.

ರಾಜ್ಯ ಸರಕಾರ ಈ ಯೋಜನೆಗೆ ತನ್ನ ಪಾಲಾದ 37.5 ಕೋಟಿ ರೂ. ಗಳನ್ನು ಒದಗಿಸಿದೆ. ರಾಜ್ಯದಲ್ಲಿ ಪ್ರಾದೇಶಿಕ ಅಸಾಮನತೆಯನ್ನು ತೊಡೆದು ಹಾಕುವ ದೃಷ್ಟಿಯಿಂದ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಗೆ ಈ ವರ್ಷ ಆಯ-ವ್ಯಯದಲ್ಲಿನೀಡಿರುವ 53 ಕೋಟಿ ರೂ. ಗಳ ಜೊತೆಗೇಇನ್ನು 50 ಕೋಟಿ ರೂ. ವಿಶೇಷ ಸಹಾಯ ಧನವನ್ನು ಸರ್ಕಾರ ಒದಗಿಸಿದೆ.

ಪರಿಶಿಷ್ಟ ಜಾತಿಗಳ ಶ್ರೆಯೋಭಿವೃದ್ಧಿಗೆ ವಿಶೇಷ ಗಮನ ನೀಡಲಾಗಿದೆ. ಅರಣ್ಯ ಜಮೀನು ಬಿಟ್ಟು ಸರ್ಕಾರದ ಜಮೀನಿನಲ್ಲಿ ಬಗರ್‌ಹುಕ್ಕಂ ಸಾಗುವಲಿ ಸಕ್ರಮ. ಜನತಾಮನೆ ನಿರ್ಮಾಣಕ್ಕಾಗಿ 15ಕೋಟಿ ಮೀಸಲು. ಮೆಟ್ರಿಕ್‌ಪೂರ್ವ, ಮೆಟ್ರಿಕ್ ನಂತರ ಹಾಗೂ ಆಶ್ರಮಗಳ ಶಾಲೆಗಳ ವಿದ್ಯಾರ್ಥಿಳಿಗೆ ಊಟ ಹಾಗೂ ಹಾಸಿಗೆ ಭತ್ಯೆಯಲ್ಲಿ ಗಣನೀಯ ಹೆಚ್ಚಳ. ಡಾ. ಬಿ. ಆರ್. ಅಂಬೇಡ್ಕರ್ ಅವರ ಜನ್ಮ ಶತಾಬ್ದಿ ಅಂಗವಾಗಿ ಬೆಂಗಳೂರಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣ ಇವು ಸರ್ಕಾರ ಈ ವರ್ಷ ಮಾಡಲಿರುವ ಪ್ರಮುಖ ಕಾರ್ಯಗಳು.

ಕೇಂದ್ರ ಸರಕಾರದ ಸಾಲ ಮನ್ನಾ ಸೂತ್ರಕ್ಕೆ ರಾಜ್ಯ ಸರಕಾರ ತಾತ್ವಿಕವಾಗಿ ಒಪ್ಪಿಕೊಂಡು 1989ರ ಅಕ್ಟೋಬರ್ 2ರ ವರೆಗೆ ರೈತರು ಪಡೆದಿರುವ ಹತ್ತು ಸಾವಿರ ರೂ. ಗಳವರೆಗಿನ ಸಾಲವನ್ನು ಮನ್ನಾ ಮಾಡಲಿದೆ. ರಾಜ್ಯದ ಒಂದು ಸಾವಿರ ಹಳ್ಳಿಗಳಿಗೆ ನೀರು ಪೂರೈಕೆ ಮತ್ತು ನೈರ್ಮಲ್ಯಕ್ಕಾಗಿ ವಿಶ್ವ ಬ್ಯಾಂಕ್ ನೆರವಿನ 143 ಕೋಟಿ ರೂ. ಸಮಗ್ರ ಯೋಜನೆ. ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ ಶೌಚಾಲಯಗಳ ನಿರ್ಮಾಣ - ನಿರ್ಮಲ ಗ್ರಾಮ ಯೋಜನೆ

ಶಿಕ್ಷಣಕ್ಕೆಹೆಚ್ಚಿನ ಉತ್ತೇಜನ ನೀಡುವ ದೃಷ್ಟಿಯಿಂದ 48 ಕೋಟಿ ರೂ. ವೆಚ್ಚದಲ್ಲಿ 18,000ಕ್ಕೂ ಹೆಚ್ಚು ಶಿಕ್ಷಕರನ್ನು ನೇಮಿಸಲಾಗುವುದು. ಶಾಲಾ ಕೊಠಡಿ ಅವಶ್ಯಕತೆಯನ್ನು ಮನಗಂಡು ವಿದ್ಯಾಮಂದಿರದ ಯೋಜನೆ ಅಡಿಯಲ್ಲಿ 5 ಸಾವಿರ ಕೊಠಡಿಗಳನ್ನು 10ಕೋಟಿ ರೂ. ವೆಚ್ಚದಲ್ಲಿ ಈ ವರ್ಷ ಕಟ್ಟಲಾಗುವುದು.

ಉತ್ತಮ ವೈದ್ಯಕೀಯ ಸೇವೆ ಒದಗಿಸಲು ಆಸ್ಪತ್ರಗಳಿಗೆ 2845ವೈದ್ಯಕೀಯ ಸಿಬ್ಬಂದಿಗಳನ್ನು ನೇಮಿಸಲಾಗುವುದು.

ಪ್ರತೇಕ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಸಾಕಾರವಾಗಲಿದೆ. ಇದಕ್ಕಾಗಿ ಸರ್ಕಾರ ಒಂದು ಕೋಟಿ ರೂ. ನೀಡಿದೆ. ಕನ್ನಡದ ಸಮಗ್ರ ಅಭಿವೃದ್ಧಿಗೆ 50ಲಕ್ಷ ರೂ. ಗಳನ್ನು ಒದಗಿಸಿದ್ದು ಕನ್ನಡ ಮಾಸಿಕ ಪುಸ್ತಕಗಳ ಪ್ರಕಾಶನ, ಮುದ್ರಣ ಸಾಮಗ್ರಿ ಇತ್ಯಾದಿ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಲಾಗಿದೆ.

ವಿವಿಧ ನ್ಯಾಯಾಲಯಗಲ್ಲಿ ಬಹಳ ದಿನಗಳಿಂದ ಇತ್ಯರ್ಥವಾಗದೆ ಉಳಿದಿರುವ ಕೌಟುಂಬಿಕ ಹಾಗೂ ಅಪಘಾತ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸಲು ಲೋಕಅದಾಲತಗಳನ್ನು ನಡೆಸಿ 1,91,715 ಪ್ರಕರಣಗಳನ್ನು ಇತ್ಯರ್ಥ ಮಾಡಲಾಗಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಲೋಕ ಅದಾಲತ್ ಸಮಾವೇಶ ಒಂದರಲ್ಲಿ 5 ಸಾವಿರ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ದಾಖಲೆಮಾಡಲಾಗಿದೆ.

ಗ್ರಾಹಕರ ಹಿತರಕ್ಷಣೆಗೆ ರಾಜ್ಯ ಮಟ್ಟದ ಆಯೋಗವೂ ಸೇರಿದಂತೆ ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾವಿಗಳಲ್ಲಿ ವಿಭಾಗ ಮಟ್ಟದ ಮಂಡಲಿಗಳನ್ನು ಸ್ಥಾಪಿಸಿದ್ದು ಪ್ರತಿ ಜಿಲ್ಲೆಗಳಲ್ಲಿ ಅದರ ಶಾಖೆಯ ಉಪನಿರ್ದೇಶಕರಿಗೆ ನೀಡುವ ಮನವಿಗಳನ್ನು ಜಿಲ್ಲಾ ಮಟ್ಟದಲ್ಲಿ ಇತ್ಯರ್ಥಗೊಳಿಸಲಾಗುವುದು.

ಜನತೆಯ ಆಶೆ-ಆಶೋತ್ತರಗಳಿಗೆ ಸ್ಪಂದಿಸಲು ಈ ಸರಕಾರ ಅಧಿಕಾರಕ್ಕೆ ಬಂದ ಅಲ್ಪಾವಧಿಯಲ್ಲೇ ಕೈಗೊಂಡ ಕೆಲವು ಸಕ್ರೀಯ ಕ್ರಮಗಳು, ಇನ್ನು ತ್ವರಿತ ಪ್ರಗತಿಯನ್ನು ಸಾಧಿಸಲು ಹಲವಾರುಯೋಜನೆಗಳು ರೂಪುಗೊಳ್ಳುತ್ತಿವೆ. ಸ್ವಾತಂತ್ರ್ಯ ದೀನೋತ್ಸವದ ಆ ಶುಭ ಸಂದರ್ಭದಲ್ಲಿ ಸರ್ಕಾರ ಜನರ ಆಶೋತ್ತರಗಳನ್ನು ಪೂರೈಸಲು ಪುನರ್ ಸಮರ್ಪಿಸಿಕೊಳ್ಳುತ್ತದೆ.

*- ಕರ್ನಾಟಕ ವಾರ್ತೆ*

Edited, Printed & Published by M. A. N. Prasad on behalf of The Mysore Association, Bombay
Printed at Aarati Art Printers, Fort, Bombay-400 001. Phone : 286 33 61